ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ
OS ನಂಬರ. 49/2018

ಪಿ ಡಬ್ಲ್ಯೂ-6

ದಿಃ 18-02-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಸತೀಶ್ ಗೌಡ
ತಂದೆಯ ಹೆಸರುಃ ತಮ್ಮಣ್ಣ
ವಯಸ್ಸುಃ 45 ವರ್ಷ
ಉದ್ಯೋಗಃ ತಹಶೀಲ್ದಾರ,
ವಿಳಾಸಃ ಕುಮಟಾ

ಮುಖ್ಯ ವಿಚಾರಣೆ: ವಾದಿಯ ಪರ ವಕೀಲರಾದ ಶ್ರೀ ಎನ್.ಎಂ.ಎನ್ ಇವರಿಂದಃ

ನಾನು ದಿಃ15-11-2024 ರಿಂದ ಇಲ್ಲಿಯವರೆಗೆ ಕುಮಟಾದಲ್ಲಿ ತಹಶೀಲ್ದಾರರು ಆಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ನಿಪಿ-63 ಹದ್ದುಬಸ್ತು ಅಳತೆಗಾಗಿ ಮಾಡಿದಂತಹ ನಕಾಶೆಯಾಗಿರುತ್ತದೆ. ಎ ಡಿ ಎಲ್ ಆರ್ ಕುಮಟಾ ಇವರು ನಿಮ್ಮ ಇಲಾಖೆಯ ಅಧೀನದಲ್ಲಿ ಬರುತ್ತಾರೆ ಎಂದರೆ ಸರಿ. ಸದರಿ ನಕಾಶೆಯನ್ನು ಸರ್ವೆ ಇಲಾಖೆಯವರು ತಯಾರಿಸಿರುತ್ತಾರೆ. ಸರ್ವೆ ಇಲಾಖೆಯವರು ನಕಾಶೆಯನ್ನು ತಯಾರಿಸಿದ ನಂತರ ಅಂತಿಮವಾಗಿ ತಹಶೀಲ್ದಾರರಿಂದ ಸಹಿಯನ್ನು ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ. ನಿಪಿ-64 ಸಹ ಹದ್ದುಬಸ್ತು ನಕಾಶೆಯಾಗಿರುತ್ತದೆ.

ನಿಪಿ-64 ನ್ನು ಸರ್ವೆ ಇಲಾಖೆಯವರು ತಯಾರಿಸಿರುತ್ತಾರೆ. ಸರ್ವೆ ಇಲಾಖೆಯವರು ನಕಾಶೆಯನ್ನು ತಯಾರಿಸಿದ ನಂತರವೂ ಸಹ ಅಂತಿಮವಾಗಿ ತಹಶೀಲ್ದಾರ ಇವರು ಅದನ್ನು ಪರಿಶೀಲನೆ ಮಾಡಿ ಸಹಿಯನ್ನು ಮಾಡುತ್ತಾರೆ ಎಂದರೆ ಸರಿ. ಸದರಿ ನಕಾಕಶೆಯಲ್ಲಿ ತಹಶೀಲ್ದಾರರ ಸಹಿ ಕಂಡುಬರುತ್ತಿಲ್ಲ.

ನ್ಯಾಯಾಲಯದ ಪ್ರಶ್ನೆಃ ಈ ಪ್ರಕರಣದಲ್ಲಿ ನೀವು ಏನು ಮಾಡಿರುತ್ತೀರಿ ಎಂದರೆ ಏನೂ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರಾದ ಶ್ರೀ ಎಂ.ಪಿ.ಬಿ ಇವರಿಂದಃ

2. ಈ ಪ್ರಕರಣಕ್ಕೆ ಸಂಬಂಧಪಟ್ಟು ಯಾವಾಗ ಸರ್ವೆಯಾಗಿರುತ್ತದೆ ಎಂದು ಗೊತ್ತಾಗಿರುವುದಿಲ್ಲ ಹಾಗೂ ಯಾರು ಸರ್ವೆ ನಕಾಶೆಯನ್ನು ತಯಾರಿಸಿರುತ್ತಾರೆ ಎಂದು ಗೊತ್ತಿರುವುದಿಲ್ಲ ಎಂದರೆ ಸರಿ. ನೀವು ಸದರಿ ನಕಾಶೆಗಳನ್ನು ಪರಿಶೀಲನೆ ಮಾಡಿ, ಸಹಿಗಳನ್ನು ಮಾಡಬೇಕು ಎಂದು ನಿಮ್ಮ ಮೇಲಾಧಿಕಾರಿಗಳಿಂದ ಯಾವುದೇ ಆದೇಶವಿರುವುದಿಲ್ಲ ಎಂದರೆ ಸರಿ. ಸದರಿ ಪ್ರಕರಣದ ಹಾಗೂ ನಕಾಶೆಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.